https://www.epaper.raichurvani.com
ಸಂಸ್ಥಾಪಕ ಸಂಪಾದಕರು : ಡಿ.ಎನ್.ಕೆ.ಕುಲಕರ್ಣಿ
ರಾಯಚೂರ ವಾಣಿ
RAICHURVANI REGIONAL KANNADA DAILY
ರಾಯಚೂರು-ಬೆಂಗಳೂರು-ಕೊಪ್ಪಳ-ಯಾದಗಿರಿ-ಕಲಬುರ್ಗಿ-ಬಳ್ಳಾರಿ-ಬೀದರ-ವಿಜಯನಗರ-ಬಾಗಲಕೋಟ
ಪ್ರಾದೇಶಿಕ ಕನ್ನಡ ದಿನಪತ್ರಿಕೆ

# ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಜ್ಞಾನ ಅವಶ್ಯಕ-ಎ.ವಸಂತಕುಮಾರ



ರಾಯಚೂರು, ಮಾ.14–

ಇಂದಿನ ದಿನಮಾನಗಳಲ್ಲಿ ಪ್ರಾಥಮಿಕ ಹಂತದಿಂದ ಪದವಿ ವರೆಗೆ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಜ್ಞಾನ ಅತ್ಯವಶ್ಯಕ ಎಂದು ವಿಧಾನ ಪರಿಷತ್ ಸದಸ್ಯ ಎ.ವಸಂತ ಕುಮಾರ್ ಹೇಳಿದರು.

ಅವರು ತಾರಾನಾಥ ಶಿಕ್ಷಣ ಸಂಸ್ಥೆಯ ಪ್ರತಿಷ್ಠಿತ ಎಲ್.ವಿ.ಡಿ ಕಾಲೇಜಿನಲ್ಲಿ ಕಂಪ್ಯೂಟರ್‌ಗಳ ಉದ್ಘಾಟನೆ ಮಾಡಿ ಮಾತನಾಡುತ್ತಿದ್ದರು.

ನಾನು ಎಲ್.ವಿ.ಡಿ ಕಾಲೇಜಿನಲ್ಲಿಯೇ ವಿದ್ಯಾಭ್ಯಾಸ ಮಾಡಿದ್ದೇನೆ. ನಮ್ಮ ಮಕ್ಕಳೂ ಇಲ್ಲಿಯೇ ಶಿಕ್ಷಣ ಪಡೆದಿದ್ದು ಅದು ನನಗೆ ಹೆಮ್ಮೆಯಾಗಿದೆ.

ತಾರಾನಾಥ ಶಿಕ್ಷಣ ಸಂಸ್ಥೆಯ ಅಧ್ಯಕ್ಷರೂ ಹಿರಿಯರಾದ ಪಾರಸಮಲ್ ಸುಖಾಣಿಯವರು ತಮ್ಮ ಅನುದಾನದಲ್ಲಿ ಕಾಲೇಜಿಗೆ ಕಂಪ್ಯೂಟರ್‌ಗಳನ್ನು ಒದಗಿಸಿ ಕೊಡಲು ಕೇಳಿಕೊಂಡಾಗ, ತಕ್ಷಣವೇ 20 ಕಂಪ್ಯೂಟರ್‌ಗಳನ್ನು ಸರಬರಾಜು ಮಾಡಲಾಗಿದೆ. ವಿದ್ಯಾರ್ಥಿಗಳು ಈ ಕಂಪ್ಯೂಟರ್ ಜ್ಞಾನ ದಿಂದ ಮುಂದೆ ಎ.ಐ ಜ್ಞಾನವನ್ನು ಪಡೆದು ತಮ್ಮ ಉಜ್ವಲ ಭವಿಷತ್ತನ್ನು ರೂಪಿಸಿಕೊಂಡು ದೇಶದ ಕೀರ್ತಿ ಬೆಳೆಸ ಬೇಕು ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಆಧ್ಯಕ್ಷ ಪಾರಸಮಲ್ ಸುಖಾಣಿ ಮಾತನಾಡಿ, ನಮ್ಮ ಸಂಸ್ಥೆಯಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿ ಗಳಿಂದ ಅತ್ಯಂತ ಕಡಿಮೆ ಶುಲ್ಕ ಪಡೆದು ಎಲ್ಲ ಸೌಕರ್ಯಗಳನ್ನು ನೀಡಲಾಗುತ್ತಿದೆ. 106 ವರ್ಷಗಳ ಸಂಸ್ಥೆಯ ಇತಿಹಾಸದಲ್ಲಿ ಸಹಸ್ರಾರು ವಿದ್ಯಾರ್ಥಿಗಳು ಶಿಕ್ಷಣ ಪಡೆದು ಉನ್ನತ ಹುದ್ದೆ ಗಳಲ್ಲಿರುವುದು ನಮಗೆ ಹೆಮ್ಮೆಯಾಗಿದೆ ಎಂದರು.

ವಿಧಾನ ಪರಿಷತ್ ಸದಸ್ಯರಾದ ಎ.ವಸಂತಕುಮಾರವರು ಎಲ್.ವಿ.ಡಿ ಕಾಲೇಜಿಗೆ 20 ಕಂಪ್ಯೂಟರ್‌ಗಳನ್ನು ಒದಗಿಸಿರುವುದಕ್ಕಾಗಿ ಸಂಸ್ಥೆಯ ಪರವಾಗಿ ಧನ್ಯವಾದಗಳನ್ನು ಸಲ್ಲಿಸಿ ಅವರು ಮುಂದೆಯೂ ನಮ್ಮೊಂದಿಗೆ ಇದೇ ರೀತಿ ಸಹಕಾರ ನೀಡುತ್ತಾರೆಂದು ಆಶಿಸುತ್ತೇನೆ ಎಂದರು.

ಸಮಾರಂಭದಲ್ಲಿ ಸಂಸ್ಥೆಯ ಪ್ರಧಾನಕಾರ್ಯದರ್ಶಿ ಅಂಬಾಪತಿ ಪಾಟೀಲ್, ಉಪಾಧ್ಯಕ್ಷ ಪವನ ಕುಮಾರ ಸುಖಾಣಿ, ಖಜಾಂಚಿ ಪುರುಷೋತ್ತಮದಾಸ ಇನ್ನಾಣಿ, ಸಂಸ್ಥೆಯ ಸದಸ್ಯರುಗಳಾದ ಎಂ.ಆರ್ ರಾಮಾಂಜನೇಯ, ಜಟ್ರಂ ಶ್ರೀನಿವಾಸ, ನಂದಾಪೂರ ಶ್ರೀನಿವಾಸ, ಶರತ ಕುಮಾರ ಕಳಸ, ವಿಷ್ಣು ಚೌದ್ರಿ, ಎಲ್.ವಿ.ಡಿ ಕಾಲೇ ಜಿನ ಆಡಳಿತ ಮಂಡಳಿಯ ಕಾರ್ಯದರ್ಶಿ ವೀರಹನುಮಾನ, ಸಂಸ್ಥೆಯ ಆಡಳಿತ ಆಧಿಕಾರಿ ಎಂ.ವೀರೇಶಪ್ಪ, ಮತ್ತು ಎಲ್.ವಿ.ಡಿ ಕಾಲೇಜಿನ ಪ್ರಾಚಾರ್ಯ ಶರಣಗೌಡ ಬಿ.ಹೆಚ್ ಇವರುಗಳು ಉಪಸ್ಥಿತರಿದ್ದರು.

https://www.epaper.raichurvani.com
ಸಂಸ್ಥಾಪಕ ಸಂಪಾದಕರು : ದಿ.ಎಸ್.ಕೆ.ಕುಲಕರ್ಣಿ

# ರಾಯಚೂರ ವಾಣಿ

RAICHURVANI REGIONAL KANNADA DAILY
ಪ್ರಾದೇಶಿಕ ಕನ್ನಡ ದಿನಪತ್ರಿಕೆ



# ಯುಗಾದಿ,ರಂಜಾನ್ ಹಬ್ಬ: ತಾರಾನಾಥ ಶಿಕ್ಷಣ ಸಂಸ್ಥೆಯ ಶಾಲಾ, ಕಾಲೇಜುಗಳ ಡಿ ಗ್ರೂಪ್ ನೌಕರರಿಗೆ 35 ಕೆಜಿ ಗೋಧಿ ವಿತರಣೆ

ರಾಯಚೂರು, ಮಾ.17-

ನಗರದ ಪ್ರತಿಷ್ಠಿತ ತಾರಾನಾಥ ಶಿಕ್ಷಣ ಸಂಸ್ಥೆಯ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಸಹ ನೂತನ ಸಂವತ್ಸರ ಯುಗಾದಿ ಹಾಗೂ ಪವಿತ್ರ ರಂಜಾನ್ ಹಬ್ಬದ ಅಂಗವಾಗಿ ತಾರಾನಾಥ ಶಿಕ್ಷಣ ಸಂಸ್ಥೆಯ ಅಡಿಯಲ್ಲಿ ಬರುವ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು ನೂರಕ್ಕೂ ಹೆಚ್ಚು 'ಡಿ' ಗ್ರೂಪ್ ನೌಕರರಿಗೆ ಸಂಸ್ಥೆಯ ಅಧ್ಯಕ್ಷರಾದ ಪಾರಸಮಲ್ ಸುಖಾಣಿ ಅವರು ಪ್ರತಿಯೊಬ್ಬರಿಗೂ 35 ಕೆಜಿ ಗೋಧಿಯನ್ನು ವಿತರಿಸಿದರು.

ಈ ಸಂದರ್ಭದಲ್ಲಿ ವ್ಯವಸ್ಥಾಪಕ ಮಂಡಳಿಯ ಕಾರ್ಯದರ್ಶಿಗಳಾದ ವೀರಹನುಮಾನ್ ಪ್ರಭಾರಿ ಪ್ರಾಚಾರ್ಯರಾದ ವೆಂಕಟೇಶ, ಬೋಧಕ - ಬೋಧಕೇತರರು ಉಪಸ್ಥಿತರಿದ್ದರು.


Powered By KHUSHIHOST ® | License - ePaperCloud.com

SUDDIMOOLA PUBLISHERS INDIA LIMITED

# ಸುದ್ದಿಮೂಲ

ಮನ – ಮನೆಯ ದಿನಪತ್ರಿಕೆ

www.suddimoola.in - https://epaper.suddimoola.in

SUDDI MOOLA Kannada Daily

ಬೆಂಗಳೂರು ಆವೃತ್ತಿ : ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿಕ್ಕಬಳ್ಳಾಪುರ, ಮೈಸೂರು | ರಾಯಚೂರು ಆವೃತ್ತಿ : ರಾಯಚೂರು, ಕೊಪ್ಪಳ, ಯಾದಗಿರಿ, ಕಲಬುರಗಿ , ಬಳ್ಳಾರಿ, ವಿಜಯನಗರ, ಬೀದರ

### ವಿವಿ ಅಂತರ್‌ಕಾಲೇಜು ಪಂದ್ಯಾವಳಿ

## ಎಲ್‌ವಿಡಿ ಕಾಲೇಜ್ ವಿದ್ಯಾರ್ಥಿನಿಯರಿಗೆ ಪ್ರಥಮ ಸ್ಥಾನ



**ಸುದ್ದಿಮೂಲ ವಾರ್ತೆ** ರಾಯಚೂರು, ಮಾ.08:
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವ ವಿದ್ಯಾಲಯದ ಅಂತರ್ ಕಾಲೇಜು ಪಂದ್ಯಾವಳಿಯಲ್ಲಿ ಎಲ್‌ವಿಡಿ ಕಾಲೇಜಿನ ವಿದ್ಯಾರ್ಥಿನಿಯರು ಉತ್ತಮ ಸಾಧನೆ ಮಾಡಿದ್ದಾರೆ.

ನಗರದ ಹೆಚ್‌ಸಿಎಂಎಸ್‌ಕೆ ಶಿಕ್ಷಣ ಮಹಾವಿದ್ಯಾಲಯ ಆಯೋಜಿಸಿದ್ದ ಅಂತರ್ ಕಾಲೇಜು ಹ್ಯಾಂಡ್‌ಬಾಲ್ ಮಹಿಳೆಯರ ಪಂದ್ಯಾವಳಿಯಲ್ಲಿ ಎಲ್‌ವಿಡಿ ಕಾಲೇಜಿನ ತಂಡದ ಕ್ರೀಡಾಪಟುಗಳಾದ ವಿನುತಾ, ಸಿಂಚನಾ, ದರ್ಶಿನಿ, ಪವಿತ್ರಾ, ರಾಜೇಶ್ವರಿ, ಮೈತ್ರಿ, ವಂಶಿಕಾ, ನಮ್ರತಾ ಮತ್ತು ಮಹೇಶ್ವರಿ ಪ್ರಥಮ ಸ್ಥಾನ ಪಡೆದು ಕೀರ್ತಿ ತಂದಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಪಾರಸಮಲ್ ಸುಖಾಣಿ, ಆಡಳಿತ ಮಂಡಳಿ ಕಾರ್ಯದರ್ಶಿ ವೀರಹನುಮಾನ, ಕಾಲೇಜಿನ ಪ್ರಾಚಾರ್ಯ ಶರಣಗೌಡ ಬಿ.ಹೆಚ್, ದೈಹಿಕ ಶಿಕ್ಷಣ ನಿರ್ದೇಶಕ ಸಂಪತ್ ಅಂಗಡಿ, ಕಾಲೇಜಿನ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.


Powered By KHUSHIHOST ®| License - ePaperCloud.com

ಸುದ್ದಿಮೂಲ

SUDDIMOOLA PUBLISHERS INDIA LIMITED

ಮನ – ಮನೆಯ ದಿನಪತ್ರಿಕೆ

www.suddimoola.in - https://epaper.suddimoola.in

SUDDI MOOLA Kannada Daily

| ಬೆಂಗಳೂರು ಆವೃತ್ತಿ : ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿಕ್ಕಬಳ್ಳಾಪುರ, ಮೈಸೂರು | ರಾಯಚೂರು ಆವೃತ್ತಿ : ರಾಯಚೂರು, ಕೊಪ್ಪಳ, ಯಾದಗಿರಿ, ಕಲಬುರಗಿ , ಬಳ್ಳಾರಿ, ವಿಜಯನಗರ, ಬೀದರ

# ಆರೋಗ್ಯಕರ ಜೀವನಕ್ಕೆ ಪೌಷ್ಟಿಕ ಆಹಾರ ಮತ್ತು ವ್ಯಾಯಾಮ ಅಗತ್ಯ - ಡಾ ನೇಹಾ ಸುಖಾಣಿ



● **ಸುದ್ದಿಮೂಲ ವಾರ್ತೆ** ರಾಯಚೂರು, ಮಾ.26: ಅತಿಯಾದ ಜಂಕ್ ಪದಾರ್ಥಗಳ ಸೇವನೆಯು ಪೌಷ್ಟಿಕಾಂಶದ ಕೊರತೆ ಹಾಗೂ ದೀರ್ಘಕಾಲದ ಕಾಯಿಲೆಗಳಿಗೆ ಕಾರಣವಾಗುತ್ತಿದೆ ಹಾಗಾಗಿ, ಪೌಷ್ಟಿಕ ಆಹಾರದ ಜೊತೆಗೆ ನಿರಂತರ ವ್ಯಾಯಾಮ ರೂಢಿಸಿಕೊಳ್ಳಲೇಬೇಕಾಗಿದೆ ಎಂದು ವೈದ್ಯೆ ಡಾ.ನೇಹಾ ಸುಖಾಣಿ ಪ್ರತಿಪಾದಿಸಿದರು.

ತಾರಾನಾಥ ಶಿಕ್ಷಣ ಸಂಸ್ಥೆಯ ಎಲ್‌ವಿಡಿ ಮಹಾವಿದ್ಯಾಲಯ, ಹಾಗೂ ಮಹಿಳಾ ಕಲ್ಯಾಣ ವೇದಿಕೆಯಿಂದ ಪೌಷ್ಟಿಕ ಆಹಾರ ಮತ್ತು ದೈಹಿಕ ಮಾನಸಿಕ ಆರೋಗ್ಯದ ಮಹತ್ವ ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಆಧುನಿಕ ಆಹಾರ ಪದ್ಧತಿಯಲ್ಲಿ ಸಂಸ್ಕರಿಸಿದ ಆಹಾರ, ಹೆಚ್ಚಿದ ಸಕ್ಕರೆ ಹಾಗೂ ಅತಿಯಾದ ಕೊಬ್ಬಿನಾಂಶವು ಹೆಚ್ಚುತ್ತಿರುವುದರಿಂದ ಮಧುಮೇಹ, ಸ್ಥೂಲಕಾಯತೆ ಮತ್ತು ಹೃದಯ ಸಂಬಂಧಿ ಕಾಯಿಲೆಗಳ ಅಪಾಯ ಹೆಚ್ಚುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಆರೋಗ್ಯಕರ ಜೀವನಕ್ಕಾಗಿ ತಾಜಾ ತರಕಾರಿಗಳು, ಹಣ್ಣುಗಳು, ಪೌಷ್ಟಿಕಾಂಶ ಮತ್ತು ಸಮತೋಲನ ಆಹಾರ ಸೇವಿಸುವುದು ಅಗತ್ಯವಾಗಿದೆ. ಜೊತೆಗೆ ನಿಯಮಿತ ವ್ಯಾಯಾಮ, ಯೋಗಾಭ್ಯಾಸ ಹಾಗೂ ಸಕಾರಾತ್ಮಕ ಚಿಂತನೆಗಳಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವುದು ಪ್ರತಿಯೊಬ್ಬರೂ ತಮ್ಮ ಜೀವನದ ಅವಿಭಾಜ್ಯ ಅಂಗವಾಗಿಸಿಕೊಂಡರೆ ದೀರ್ಘಾಯುಷ್ಯ ಹಾಗೂ ಸಂತೋಷಕರ ಜೀವನ ನಡೆಸಲು ಸಾಧ್ಯವಾಗುತ್ತದೆಯಲ್ಲದೆ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ ಎಂದು ಹೇಳಿದರು.

ಕಾಲೇಜು ಆಡಳಿತ ಮಂಡಳಿಯ ಕಾರ್ಯದರ್ಶಿ ವೀರಹನುಮಾನ ಮಾತನಾಡಿ, ಆಧುನಿಕ ಜೀವನ ಶೈಲಿಯಿಂದ ಜನರಲ್ಲಿ ಹೃದಯ ಸಂಬಂಧಿ ರೋಗಗಳು ಹೆಚ್ಚಾಗುತ್ತಿದ್ದು, ಆರೋಗ್ಯ ಸ್ನೇಹಿ ಜೀವನ ಶೈಲಿ ಅಳವಡಿಸಿಕೊಳ್ಳಬೇಕಿದೆ ಎಂದು ಹೇಳಿದರು.

ವೇದಿಕೆಯ ಮೇಲೆ ಕಾಲೇಜಿನ ಆಡಳಿತ ಮಂಡಳಿಯ ಸದಸ್ಯ ಕೆ ನಾಗನಗೌಡ, ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ಸ್ಥಾನವನ್ನು ಪ್ರಭಾರಿ ಪ್ರಾಚಾರ್ಯ ವೆಂಕಟೇಶ ವಹಿಸಿದ್ದರು. ಮಹಿಳಾ ಕಲ್ಯಾಣ ವೇದಿಕೆಯ ಅಧ್ಯಕ್ಷೆ ಡಾ.ಕಮಲಾ ನವರತ್ನ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯದರ್ಶಿ ಡಾ.ಅರುಣಾ ಹಿರೇಮಠ ಪ್ರಾಧ್ಯಾಪಕರು, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



Powered By KHUSHIHOST ® | License - ePaperCloud.com

SUDDIMOOLA PUBLISHERS INDIA LIMITED

# ಸುದ್ದಿಮೂಲ

ಮನ – ಮನೆಯ ದಿನಪತ್ರಿಕೆ

www.suddimoola.in - https://epaper.suddimoola.in

SUDDI MOOLA Kannada Daily

| ಬೆಂಗಳೂರು ಆವೃತ್ತಿ : ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿಕ್ಕಬಳ್ಳಾಪುರ, ಮೈಸೂರು

| ರಾಯಚೂರು ಆವೃತ್ತಿ : ರಾಯಚೂರು, ಕೊಪ್ಪಳ, ಯಾದಗಿರಿ, ಕಲಬುರಗಿ , ಬಳ್ಳಾರಿ, ವಿಜಯನಗರ, ಬೀದರ

## ಭಾಷಾ ಸಂವಹನ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮ

# ಉತ್ತಮ ಸಂವಹನ ಕೌಶಲ್ಯ ಅನಿವಾರ್ಯ – ಡಾ.ಟಿ.ಶ್ರೀನಿವಾಸ

**• ಸುದ್ದಿಮೂಲ ವಾರ್ತೆ** ರಾಯಚೂರು, ಫೆ.27: ವಿದ್ಯಾರ್ಥಿಗಳು ಕೇವಲ ಅಂಕ, ತಮ್ಮ ಪುಸ್ತಕ ಜ್ಞಾನಕ್ಕೆ ಸೀಮಿತರಾದರೆ ಸಾಲದು ಉತ್ತಮ ಸಂವಹನ ಕೌಶಲ್ಯ ಇಂದು ತೀರಾ ಅನಿವಾರ್ಯ ಎಂದು ನವೋದಯ ಶಿಕ್ಷಣ ಸಂಸ್ಥೆ ಕುಲಸಚಿವ ಡಾ.ಟಿ.ಶ್ರೀನಿವಾಸ ಹೇಳಿದರು.

ಇಂದು ನಗರದ ಎಲ್‌ವಿಡಿ ಮಹಾವಿದ್ಯಾಲಯದಲ್ಲಿ ಭಾಷಾ ಸಂವಹನ ಕೌಶಲ್ಯಭಿವೃದ್ಧಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನಾವು ಆಡುವ ಭಾಷೆ ವ್ಯಕ್ತಿತ್ವವನ್ನು ತೋರಿಸುತ್ತದೆ. ವಿದ್ಯಾರ್ಥಿಗಳು ವ್ಯಕ್ತಿತ್ವದಿಂದ ವಿಚಾರವಂತರಾಗುತ್ತಾರೆ ಎಂದರು.

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿವಿ ಕನ್ನಡ ಉಪನ್ಯಾಸಕಿ ಡಾ.ಶಿವಲೀಲಾ ಬಸನಗೌಡ ಮಾತನಾಡಿ,ವಿದ್ಯಾರ್ಥಿಗಳು ತಮ್ಮ ಪ್ರತಿಭೆ ಪ್ರದರ್ಶಿಸಲು ಭಾಷೆ ಬಹು ಮುಖ್ಯವಾದುದು. ಸಮಾಜದಲ್ಲಿ




ಗೌರವಯುತ ಸ್ಥಾನ ಪಡೆಯಲು ಭಾಷಾ ಕೌಶಲ್ಯವನ್ನು ಬಳಸಿದಾಗ ಮಾತ್ರ ಜೀವನದಲ್ಲಿ ಮುಂದೆ ಬರಲು ಸಾಧ್ಯ ಎಂದು ಹೇಳಿದರು.

ವಿವಿಯ ಇಂಗ್ಲೀಷ ವಿಭಾಗದ ಪ್ರಾಧ್ಯಾಪಕ ಅನಿಲ್ ಅಪ್ರಾಳ್ ಮಾತನಾಡಿ, ಭಾಷೆ ಕೇವಲ ಮಾತಿನ ಮಾಧ್ಯಮವಲ್ಲ. ಆಲೋಚನೆಗಳ ಆಭರಣ, ಸರಳ, ಶುದ್ಧ ಮತ್ತು ಸಾರ್ಥಕ ಭಾಷೆ ಜ್ಞಾನಕ್ಕೆ ಮೆರುಗು ನೀಡುತ್ತದೆ ಎಂದರು.

ಬಿಆರ್‌ಬಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ. ಶ್ಯಾಮ ಗಾಯಕವಾಡ್ ಮಾತನಾಡಿ ಒಳ್ಳೆಯ ಸಂವಹನ ಕೌಶಲ್ಯ ಹೊಂದಿದ ವ್ಯಕ್ತಿ ಆತ್ಮವಿಶ್ವಾಸದಿಂದ ಇತರರ ಮನಸ್ಸು ಗೆಲ್ಲುತ್ತಾನೆ. ನಾಯಕತ್ವದ ಗುಣಗಳನ್ನು ಪ್ರದರ್ಶಿಸುತ್ತಾನೆ. ಸಮಾಜದಲ್ಲಿ ಗೌರವ ಪಡೆಯುತ್ತಾನೆ. ಹೀಗಾಗಿ ಜ್ಞಾನ ಮತ್ತು ಭಾಷಾ ಸಂವಹನ ಎರಡು ಪರಸ್ಪರ ಪೂರಕ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಬಿ.ಎಚ್.ಶರಣಗೌಡ, ಉಪ-ಪ್ರಾಚಾರ್ಯ ಡಾ. ಆಂಜನೇಯ, ಕಾರ್ಯಕ್ರಮದ ಸಂಯೋಜಕಿ ಡಾ. ಅರುಣಾ ಹಿರೇಮಠ ಮಾತನಾಡಿದರು.

ಕಾರ್ಯಕ್ರಮದಲ್ಲಿ ಡಾ.ಮಲ್ಕಣ್ಣ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇದ್ದರು.



Powered By KHUSHIHOST ® | License - ePaperCloud.com

